ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 19/02/2025 ರಂದು ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ **PKU** ವಕೀಲರಿಂದಃ

1. ರಾಜೂರ ಗ್ರಾಮದಲ್ಲಿ ಮೇಲಿನ ಮನೆ ಗೌಡ್ರು ಹಾಗೂ ಕೆಳಗಡೆ ಮನೆ ಗೌಡ್ರು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಎರಡು ಮನೆ ಗೌಡ್ರುಗಳಿಗೆ ನಾವು ಗುರುಗಳು ಎಂದರೆ ನಿಜ. ಮೇಲಿನ ಮನೆ ಗೌಡ್ರು ಹಂಡೆ ವಜೀರ ಸಂಘ ಎಂದು ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಬರ 205/2 ಆಸ್ತಿ ಮೂಲತಃ ನಮ್ಮ ಆಸ್ತಿ. ಅದನ್ನು ನನ್ನ ತಂದೆ 1981-1982 ರಲ್ಲಿ ಎನ್ ಎ ಮಾಡಿಸಿದ್ದಾರೆ. ಎನ್ ಎ ಗೆ ಸಂಬಂಧಪಟ್ಟ ದಾಖಲೆಗಳನ್ನು ಈ ನ್ಯಾಯಾಲಯದಲ್ಲಿ ಹಾಜರುಮಾಡಿಲ್ಲ ಎಂದರೆ ನಿಜ. ಎನ್ ಎ ದಾಖಲೆಗಳನ್ನು ಹಾಜರುಮಾಡಲು ನನಗೆ ತೊಂದರೆ ಇಲ್ಲ. ಎನ್ ಎ ಆಗಿದ್ದರಿಂದ ಅದು ಶೇತ್ಕಿ ಜಮೀನು ಆಗಿ ಉಳಿದಿಲ್ಲಾ ಎಂದರೆ ನಿಜ. ಎನ್ ಎ ಆದ ನಂತರ ನಾನು ಮತ್ತು ಮಲ್ಲಿಕಾರ್ಜುನಯ್ಯ 18 ಗುಂಟೆಯಂತೆ ಎರಡು ಪಹಣಿಗಳನ್ನು ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಆರ್ ಟಿ ಸಿ ತೋರಿಸಲಾಗಿ, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-1 ಎಂದು ಹಾಗೂ ಅದರ ಮ್ಯೂಟೇಷನ್ ನನ್ನು ನಿಡಿ-2 ಎಂದು ಗುರುತಿಸಲಾಯಿತು. ಎನ್ ಎ ಆಗಿದ್ದರಿಂದ ನಾವು ಖೊಟ್ಟಿಪಹಣಿ ಪತ್ರಿಕೆ ಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಕೇಸ್ ಹಾಕಲು ನಾನೇ ಮಾಹಿತಿ ಕೊಟ್ಟಿದ್ದೇನೆ. ನಾನು ವಾದ ಪತ್ರದಲ್ಲಿ ಬಿನ್ ಶೇತ್ಕಿ ಪ್ಲಾಟ್ ನಂಬರ 1, 2, 8 ಇದರ ಚೆಕ್ ಬಂದಿ ಕಾಣಿಸಿಲ್ಲಾ ಎಂಂದರೆ ನಿಜ. ವಿ.ಪಿ.ಸಿ. 408/386 ಸದರಿ ಆಸ್ತಿ ಮೂಲತಃ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ವಿ.ಪಿ.ಸಿ. 408/386 ಮೂಲತಃ ಮೇಲಿನಮನಿ ಗೌಡ್ರ ಇವರಿಗೆ ಸೇರಿದ ಆಸ್ತಿಯಾಗಿದ್ದು, ಅದು ಪಂಚಾಯತಿಯಲ್ಲಿ ದಾಖಲು ಆಗಿತ್ತು ಎಂದರೆ ಸಾಕ್ಷಿ ಅದು ಖೊಟ್ಟಿಯಾಗಿ ಸೃಷ್ಟಿ ಮಾಡಿದ್ದಾರೆ ಎಂದು ಹೇಳುತ್ತಾರೆ. ವಿ.ಪಿ.ಸಿ. 408/386 ರ 2016-17 ನೇ ಸಾಲಿನ ಉತಾರದಲ್ಲಿ ಮೇಲಿನಮನಿ ಗೌಡ್ರ ಸಾಮೂಹಿಕ ಎಂದು ದಾಖಲು ಇದೆ ಎಂದರೆ ಅದು ಹುಟ್ಟಿಸಿಕೊಂಡ ದಾಖಲೆ ಎಂದು ಹೇಳುತ್ತಾರೆ. ನಾನು ವಿ.ಪಿ.ಸಿ. 408/386 ಆಸ್ತಿಯ ಉತಾರವನು ನಾನು ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ. ನಾನು ಉತಾರವನ್ನು ನೋಡಿದ್ದೇನೆ. ಅದು ಮೇಲಿನಮನಿ ಗೌಡ್ರ ಎಂದು ದಾಖಲು ಆಗಿದೆ, ಅದು ಖೊಟ್ಟಿಯಾಗಿ ದಾಖಲು ಆಗಿದೆ ಎಂದು ಹೇಳುತ್ತಾರೆ. ಅದು ಖೊಟ್ಟಿಯಾಗಿದೆ ಅದನ್ನು ರದ್ದು ಮಾಡಿ ಎಂದು ನಾನು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿಲ್ಲ. ಸದರಿ ಕೇಸ್ ನಲ್ಲಿ ನಾನು ಅದನ್ನು ರದ್ದು ಮಾಡುವ ಬಗ್ಗೆ ನಾನು ಯಾವುದೇ ಪರಿಹಾರ ಕೇಳಿಲ್ಲಾ ಎಂದರೆ ನಿಜ. ವಿ.ಪಿ.ಸಿ. 408/386 ಮೇಲಿನಮನಿ ಗೌಡ್ರ ಇವರ ಹೆಸರಿನಲ್ಲಿ

ಸಾಮೂಹಿಕವಾಗಿ ದಾಖಲು ಆಗಿದ್ದರೂ ಸಹ ಅದು ಖೊಟ್ಟಿಯಾಗಿ ದಾಖಲು ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿ.ಪಿ.ಸಿ. 408/386 ಸಾಮೂಹಿಕ ಮಾಲೀಕರು ಸದರಿ ಆಸ್ತಿಯನ್ನು ಹಂಡೆವಜೀರ್ ಕ್ಷೇಮಾಭಿವೃದ್ದಿ ಸಂಘಕ್ಕೆ 2016 ರಲ್ಲಿ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಪ್ರಕಾರ ಮೇಲಿನಮನಿ ಗೌಡ್ರ ಇವರ ಹೆಸರು ಕಡಿಮೆಯಾಗಿ ಅಧ್ಯಕ್ಷರು ಹಂಡೆವಜೀರ್ ಕ್ಷೇಮಾಭಿವೃದ್ದಿ ಸಂಘ ಎಂದು ದಾಖಲು ಆಗಿದೆ ಎಂದರೆ ಸರಿಯಲ್ಲ. ಆ ಬಗ್ಗೆ 16/11/2018 ರಂದು ಠರಾವು ಕೂಡ ಆಗಿದೆ ಎಂದರೆ ಅದು ನನಗೆ ಗೊತ್ತಿಲ್ಲಾ ಎಂದು ಹೇಳುತ್ತಾರೆ. ಹಂಡೆವಜೀರ್ ಕ್ಷೇಮಾಭಿವೃದ್ದಿ ಸಂಘದ ಹೆಸರುನ್ನು ಮತ್ತು ಠರಾವನ್ನು ನಾನು ಅಥವಾ ಬೇರೆ ಯಾರು ಅದನ್ನು ಪ್ರಶ್ನೆ ಮಾಡಿಲ್ಲಾ ಎಂದರೆ ಸಾಕ್ಷಿ ನಾನು ಈ ದಾವೆ ಹಾಕಿ ಅದನ್ನು ಪ್ರಶ್ನೆ ಮಾಡಿದ್ದಾಗಿ ಹೇಳುತ್ತಾರೆ.

2. OS 120/2018 ರಲ್ಲಿ ನಾನು ಸಲ್ಲಿಸಿದ ವಾದ ಪತ್ರವನ್ನು ಈಗ ನೋಡುತ್ತಿದ್ದೇನೆ OS 120/2018 ಹಾಗೂ ಈ ದಾವಾ ಆಸ್ತಿ ಎರಡು ಒಂದೆ. OS 397/2018 ಈ ಕೇಸ್ ಮಾಡುವ ಪೂರ್ವದಲ್ಲಿ OS 120/2018 ದಾಖಲು ಆಗಿದ್ದ ಬಗ್ಗೆ ನನಗೆ ಗೊತ್ತಿತ್ತು ಎಂದರೆ ನಿಜ. ಸಾಕ್ಷಿ OS 120/2018 ಅದು ಸಂಗಮೇಶ್ವರ ಟ್ರಸ್ಟ ಕಮೀಟಿ ಹೆಸರಿನಲ್ಲಿ ಮೊದಲು ಜಾಗ ಇದ್ದಿದ್ದರಿಂದ ಆ ದಾವೆ ಮಾಡಿದ್ದೇವೆ ಎಂದು ಹೇಳುತ್ತಾರೆ. OS 120/2018 ಕೇಸ್ ದಾಖಲು ಮಾಡಿದ ಬಗ್ಗೆ ಈ ದಾವೆಯಲ್ಲಿ ಕಾಣಿಸಿಲ್ಲಾ ಎಂದರೆ ನಿಜ. OS 120/2018 ರಲ್ಲಿ ಪ್ರತಿವಾದಿಯರು ಕೈಪಿಯತ್ತು ಸಲ್ಲಿಸಿ ಸಂಗಮೇಶ್ವರ ಟ್ರಸ್ಟ ಕಮೀಟಿ ಎಂದು ಹೆಸರು ಇರಲಿಲ್ಲಾ ಎಂದು ತಕರಾರು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ಹಾಕಿದ ತಕರಾರಿನಲ್ಲಿ ಈ ದಾವಾ ಆಸ್ತಿ ನಮಗೆ ಸೇರಿದ್ದು ಅಲ್ಲಾ ಎಂದು ತಕರಾರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಆ ದಾವೆಯಲ್ಲಿ ಸರ್ವೇ ನಂಬರ 227/2 ಕ್ಷೇತ್ರ 10 ಗುಂಟೆ ಆಸ್ತಿಯ ಸಲುವಾಗಿ OS 120/2018 ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆ ಕೇಸ್ ನ ಪ್ರತಿವಾದಿಯರು ಗಜೇಂದ್ರಗಡ ಹೈವೇ ಆಗುವಾಗ ನಮ್ಮ 10 ಗುಂಟೆ ಜಾಗ ಹೈವೇಗೆ ಹೋಗಿದೆ ಎಂದು ಕೈಪಿಯತ್ತು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನಾನು ಆ ಕೇಸ್ ನಲ್ಲಿ ಹಾತನಕಾಶೆಯಲ್ಲಿ ಹಾಜರುಮಾಡಿದ್ದೇನೋ ಇಲ್ಲವೊ ನನಗೆ ನೆನಪಿಲ್ಲ. ನಾನು ಈಗ OS 120/2018 ರಲ್ಲಿ ಹಾಕಿದ ವಾದ ಪತ್ರ ಮತ್ತು ಹಾತನಕಾಶೆಯನ್ನು ನೋಡುತ್ತಿದ್ದೇನೆ. ಅದರಲ್ಲಿ ಹಾಕಿದ ಹಾತನಕಾಶೆಯನ್ನು ನಾನೇ ಹಾಜರುಮಾಡಿರುತ್ತೇನೆ. ಅದನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅದನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಈ ದಾವೆಯಲ್ಲಿ ಅಂದರೆ OS 397/2018 ರಲ್ಲಿ ಹಾತನಕಾಶೆಯನ್ನು ಸಲ್ಲಿಸಿದ್ದೇನೆ. ಈ ದಾವೆಯ ಹಾತನಕಾಶೆ ಮತ್ತು OS 120/2018 ರಲ್ಲಿ ಹಾಕಿದ ಹಾತನಕಾಶೆ

ತದ್ವಿರುದ್ಧವಾಗಿದೆ ಎಂದರೆ ಸರಿಯಲ್ಲ. ಎರಡು ಹಾತನಕಾಶೆಗಳು ನನಗೆ ಅನುಕೂಲವಾಗುವಂತೆ ಸೃಷ್ಟಿ ಮಾಡಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಅದು ವಾಸ್ಥವ ಸ್ಥಿತಿಯನ್ನು ತೋರಿಸುವುದಿಲ್ಲಾ ಎಂದರೆ ಸರಿಯಲ್ಲ. ಪ್ಲಾಟ್ ನಂಬರ 1 ಮತ್ತು 8 ಉತ್ತರಕ್ಕೆ ವಿ ಪಿಸಿ 408/386 ಪ್ರತಿವಾದಿಯರ ಖುಲ್ಲಾ ಜಾಗ ಇದೆ ಎಂದರೆ ಸಾಕ್ಷಿ ರಾಜೂರಿನಿಂದ ಕಾತ್ರಾಳಕ್ಕೆ ಹೋಗುವ ಸರ್ವಿಸ್ ರಸ್ತೆ ಇದೆ ಎಂದು ಹೇಳುತ್ತಾರೆ. ಆ ರೀತಿ ಯಾವುದೇ ರಸ್ತೆ ಇಲ್ಲಾ ಎಂದರೆ ಸರಿಯಲ್ಲ. ನಾನು ಹಾಜರುಮಾಡಿದ ನಿಪಿ-12 ಪಿ ಟಿ ಶೀಟ್ ನಲ್ಲಿ ರಾಜೂರು-ಕಾತ್ರಾಳ ಸರ್ವಿಸ್ ರಸ್ತೆ ಕಾಣಿಸಿಲ್ಲಾ ಎಂದರೆ ನಿಜ. ಆ ರಸ್ತೆ ಅಸ್ತಿತ್ವದಲ್ಲಿ ಇದೆ ಎಂಬ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಮಾಡಿಲ್ಲಾ ಎಂದರೆ ಸಾಕ್ಷಿ ಎನ್ ಎ ಆದೇಶ ಪತ್ರ ವನ್ನು ಹಾಜರುಮಾಡಿದ್ದಾಗಿ ಹೇಳುತ್ತಾರೆ ಆ ರೀತಿ ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-10 ಗ್ರಾಮ ನಕಾಶೆಯನ್ನು ನೋಡುತ್ತಿದ್ದೇನೆ. ಅದರಲ್ಲಿ ರಾಜುರು-ಕಾತ್ರಾಳ ರಸ್ತೆ ಕಾಣುತ್ತಿಲ್ಲಾ ಎಂದರೆ ಸಾಕ್ಷಿ ಆ ಬಗ್ಗೆ ಈ ನಕಾಶೆಯಲ್ಲಿ ನಮೂದು ಇಲ್ಲ, ರಾಜೂರು ಗ್ರಾಮದ ಒಳಗಡೆಯಿಂದ ಪೂರ್ವ-ಪಶ್ಚಿಮ ಹಾದು ಹೋಗುತ್ತದೆ ಎಂದು ಹೇಳುತ್ತಾರೆ. ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ವಿ ಪಿ ಸಿ 408/386 ಪೂರ್ವ-ಪಶ್ಚಿಮ-150 ಅಡಿ ಹಾಗೂ ಉತ್ತರ-ದಕ್ಷಿಣ 75 ಅಡಿ ಈ ಆಸ್ತಿ 60-70 ವರ್ಷಗಳ ಹಿಂದೆಯೇ ಮೇಲಿನಮನೆ ಗೌಡ್ರು ಇವರು ಸಾಮೂಹಿಕವಾಗಿ ಹಂಡೆವಜೀರ್ ಕ್ಷೇಮಾಭಿವೃದ್ಧಿ ಸಂಘಕ್ಕೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅದು ಪಂಚಾಯತಿಯಿಂದ ಹುಟ್ಟಿಸಿದ ದಾಖಲೆ ಎಂದು ಹೇಳುತ್ತಾರೆ. ಸದರಿ ಆಸ್ತಿಗೆ ಹಂಡೆವಜೀರ್ ಕ್ಷೇಮಾಭಿವೃದ್ಧಿ ಸಂಘದವರೇ ಮಾಲೀಕರಾಗಿ ಮತ್ತು ಕಬ್ಜಾ ವಹಿವಾಟಿನಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಅವರು ಪಂಚಾಯತಿ ಕರ ತುಂಬುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ನಾನು ಈಗ ಎರಡು ಪೊಟೋಗಳನ್ನು ನೋಡುತ್ತಿದ್ದೇನೆ. ಅದರಲ್ಲಿ ಕಾಣುತ್ತಿರುವ ರಸ್ತೆ ರೋಣ-ಗಜೇಂದ್ರಗಡ ರಸ್ತೆ ಎಂದರೆ ಸರಿಯಲ್ಲ. ಸದರಿ ಪೊಟೋದಲ್ಲಿ ಕಾಣುತ್ತಿರುವ ನಮ್ಮ ಆಸ್ತಿಯ ಮುಂದೆ ಇರುವಂತಹ ಜಾಗ ಪ್ರತಿವಾದಿಯರ ಜಾಗ ಎಂದರೆ ಸಾಕ್ಷಿ ಅಲ್ಲಿ ಜಾಗ ಇಲ್ಲ ರಸ್ತೆ ಇದೆ ಎಂದು ಹೇಳುತ್ತಾರೆ. ಸದರಿ ಜಾಗಕ್ಕೆ ಸಂಬಂಧಪಟ್ಟಂತೆ ಪೊಟೋಗಳನ್ನು ಹಾಜರುಮಾಡಬಲ್ಲೆ.

4. ಹಂಡೆವಜೀರ್ ಕ್ಷೇಮಾಭಿವೃದ್ಧಿ ಸಂಘಕ್ಕೆ ಸೇರಿದವರ ಆಸ್ತಿಯನ್ನು ಎತ್ತಿಹಾಕಬೇಕೆಂಬ ಉದ್ದೇಶದಿಂದ ಅಲ್ಲಿ ಅವರಿಗೆ ಸೇರಿದ ಜಾಗ ಇಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಂಡೆವಜೀರ್ ಕ್ಷೇಮಾಭಿವೃದ್ಧಿ ಸಂಘದವರು ತಮಗೆ ಸೇರಿದ ಜಾಗದಲ್ಲಿ ಸಭಾ ಭವನ ಕಟ್ಟಬೇಕು

ಎಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಆ ಬಗ್ಗೆ ಪಂಚಾಯತಿಯರು ಸ್ಥಾನಿಕ ಚೌಕಾಸಿ ಮಾಡಿ ದಿನಾಂಕ 28/03/2018 ರಂದು ಪರವಾಣಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಭಾ ಭವನ ಕಟ್ಟುವ ಬಗ್ಗೆ ರೋಣ ಶಾಸಕರಿಂದ ರೂ.3,00,000/-ಅನುದಾನ ಮತ್ತು ಸಾರ್ವಜನಿಕರಿಂದ ದೇಣಿಗೆ ಹಣವನ್ನು ಸಂಗ್ರಹ ಮಾಡಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಅಲ್ಲಿ ಭವನ ನಿರ್ಮಾಣ ಮಾಡಲು ಪ್ರಯತ್ನ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲ್ ನಾನು ಆ ಭವನದ ಆಡಳಿತವನ್ನು ನನಗೆ ಕೊಡಬೇಕು ಹಾಗೂ ಅದಕ್ಕೆ ನಮ್ಮ ಸಮಾಜದ ಹೆಸರನ್ನು ಇಡಬೇಕು ಎಂದು ಷರತ್ತು ಹಾಕಿದ್ದೆ ಎಂದರೆ ಸರಿಯಲ್ಲ. ಅದಕ್ಕೆ ನಾನು ಒಪ್ಪದ ಕಾರಣ ನಾನು ಅವರ ವಿರುದ್ದ ಸಿಟ್ಟಾಗ OS 397/2018 ನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಹಂಡೆವಜೀರ್ ಕ್ಷೇಮಾಭಿವೃದ್ದಿ ಸಂಘ 408/386 ಆಸ್ತಿಯ ಮೇಲೆ ನನಗೆ ಮತ್ತು ಮಲ್ಲಿಕಾರ್ಜುನಯ್ಯನಿಗೆ ಮತ್ತು ರೋಣದ ಮತ್ತು ಕಳಕಾಪೂರ ಇವರಿಗೆ ಯಾವುದೇ ಹಕ್ಕು ಮತ್ತು ಹಿತಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಆ ಕಾರಣದಿಂದ ಸದರಿ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲಾ ಎಂದರೆ ಸರಿಯಲ್ಲ. ಹಂಡೆವಜೀರ್ ಕ್ಷೇಮಾಭಿವೃದ್ದಿ ಸಂಘ ನೊಂದಾಯಿತ ಸಂಘ ಎಂದರೆ ನನಗೆ ಗೊತ್ತಿಲ್ಲ. ನಾನು ಸುಳ್ಳು ಕೇಸ್ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಕಾಣಿಸಿದ ಎಲ್ಲಾ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ವಿ.ಪಿ.ಸಿ. 408/386 ಮೇಲಿನ ಮನೆ ಗೌಡ್ರ ಸಾಮೂಹಿಕ ಎಂದು ದಾಖಲು ಆಗಿರುವುದು ಕಾಣುತ್ತಿದೆ ಎಂದರೆ ಸಾಕ್ಷಿ ಅದನ್ನು ಪಂಚಾಯತಿಯಲ್ಲಿ ಹುಟ್ಟಿಸಿದ್ದಾಗಿ ಹೇಳುತ್ತಾರೆ. ನಿಪಿ-9 Proceedings book 1963-67 ರಿಂದ 2017-18 ರವರೆಗೆ ಇದೆ ಎಂದರೆ ನಿಜ. ಸಾಕ್ಷಿ ಅದು ಖೊಟ್ಟಿದಾಖಲೆ ಎಂದು ಹೇಳುತ್ತಾರೆ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.